# ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ

ದೀಕ್ಷಾಸ್ನಾನ ಆಗಬೇಕೆಂಬ ಯೇಸುವಿನ ಆಜ್ಞೆಯನ್ನು ಕಲಿಸಲು ಈ ಕೆಳಗಿನವು ಒಂದು ರೂಪುರೇಖೆಯಾಗಿದೆ.

## ಭಾಗ ಒಂದು

## ಹಿಂತಿರುಗಿ ನೋಡುವುದು

### ಪ್ರಾರ್ಥನೆ

ಒಟ್ಟಿಗೆ ಪ್ರಾರ್ಥನೆಯಲ್ಲಿ ಸಮಯವನ್ನು ಪ್ರಾರಂಭಿಸಿ.

# ಹೊಣೆಗಾರಿಕೆ

ಮಾಡಿದ ಬದ್ಧತೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ. ಉದಾಹರಣೆಗೆ, ಹೀಗೆ ಕೇಳಿರಿ:

- ನೀವು ಕೊನೆಯ ಬಾರಿಗೆ ಕಥೆಯನ್ನು ಯಾರೊಂದಿಗಾದರು ಹಂಚಿಕೊಂಡಿದ್ದೀರಾ?
- ನೀವು ಪ್ರತಿದಿನ ಸತ್ಯವೇದವನ್ನು ಓದಿದ್ದೀರಾ ಅಥವಾ ಕೇಳಿದ್ದೀರಾ?
- ದೇವರು ನಿಮಗೆ ಕಲಿಸಿದ್ದನ್ನು ನೀವು ಹೇಗೆ ಪಾಲಿಸಿದ್ದೀರಿ?
- ನೀವು ಹಂಚಿಕೊಳ್ಳಲು ಬಯಸುವ ಯಾವುದೇ ಪ್ರಾರ್ಥನೆ ವಿನಂತಿಗಳು ಅಥವಾ ಕಥೆಗಳು ಇದೆಯೇ?

# ಭಾಗ ಎರಡು
# ಮೇಲಕ್ಕೆ ನೋಡುವುದು

## ಅಧ್ಯಯನ

ಒಟ್ಟಿಗೆ ಸತ್ಯವೇದದ ಅಧ್ಯಯನ ಮಾಡುವ ಮೂಲಕ ದೀಕ್ಷಾಸ್ನಾನ ಪಡೆಯುವ ಯೇಸುವಿನ ಆಜ್ಞೆಯ ಬಗ್ಗೆ ಕಲಿಸಿ. ಯೇಸು ಆಜ್ಞೆಯನ್ನು ನೀಡಿದ ಸಮಯವನ್ನು ಮೊದಲು ಓದಿ ಮತ್ತು ಆಜ್ಞೆಯನ್ನು ಪಾಲಿಸುವುದು ಹೇಗೆ ಎಂದು ವಿವರಿಸುವ ಕಥೆಯನ್ನು ಚರ್ಚಿಸಿ.

ಮತ್ತಾಯ 28:18–20:

> ಆಗ ಯೇಸು ಹತ್ತಿರಕ್ಕೆ ಬಂದು – ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ

> ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ – ಮಗನ – ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.

ಯೇಸುವು ತನ್ನ ಹಿಂಬಾಲಕರಿಗೆ, ತನ್ನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಲು ಸ್ಪಷ್ಟ ಆಜ್ಞೆಯನ್ನು ನೀಡುತ್ತಾನೆ. ಯೇಸುವನ್ನು ಅನುಸರಿಸುವ ಭಾಗವು ದೀಕ್ಷಾಸ್ನಾನ ಪಡೆಯುವಂಥದ್ದಾಗಿರುತ್ತದೆ.

ಅ.ಕೃ. 8:26–39:

> ಅಷ್ಟರಲ್ಲಿ ಕರ್ತನ ದೂತನು ಫಿಲಿಪ್ಪನಿಗೆ – ನೀನು ಎದ್ದು ದಕ್ಷಿಣ ಕಡೆಗೆ ಯೆರೂಸಲೇಮಿನಿಂದ ಗಾಜಕ್ಕೆ ಹೋಗುವ ದಾರಿಯಲ್ಲಿ ಹೋಗು, ಅದು ಅಡವಿ ಎಂದು ಹೇಳಿದನು. ಅವನು ಎದ್ದು ಹೊರಟುಹೋದನು; ಹೋಗುತ್ತಿರುವಾಗ ಐಥಿಯೋಪ್ಯ ದೇಶದ ಒಬ್ಬ ಮನುಷ್ಯನನ್ನು ಕಂಡನು. ಅವನು ಕಂಚುಕಿಯೂ ಐಥಿಯೋ – ಪ್ಯದವರ ರಾಣಿಯಾಗಿದ್ದ ಕಂದಾಕೆಯ ಕೈಕೆಳಗೆ ದೊಡ್ಡ ಅಧಿಕಾರಿಯೂ ಆಕೆಯ ಎಲ್ಲಾ ಖಜಾನೆಯ ಮೇಲ್ವಿ – ಚಾರಕನೂ

ಆಗಿದ್ದನು. ಅವನು ದೇವಾರಾಧನೆಗೋಸ್ಕರ ಯೆರೂಸಲೇಮಿಗೆ ಬಂದು ಹಿಂತಿರುಗಿ ಹೋಗುವಾಗ ತನ್ನ ರಥದಲ್ಲಿ ಕೂತುಕೊಂಡು ಯೆಶಾಯ ಪ್ರವಾದಿಯ ಗ್ರಂಥವನ್ನು ಓದುತ್ತಿದ್ದನು. ದೇವರಾತ್ಮನು ಫಿಲಿಪ್ಪನಿಗೆ – ನೀನು ಆ ರಥದ ಹತ್ತಿರ ಹೋಗಿ ಅದರ ಸಂಗಡಲೇ ನಡೆ ಎಂದು ಹೇಳಿದನು. ಫಿಲಿಪ್ಪನು ಓಡಿ ಹೋಗಿ ಆ ಮನುಷ್ಯನು ಯೆಶಾಯ ಪ್ರವಾದಿಯ ಗ್ರಂಥವನ್ನು ಓದುತ್ತಿರುವುದನ್ನು ಕೇಳಿ – ಎಲೈ, ನೀನು ಓದುವುದು ನಿನಗೆ ತಿಳಿಯುತ್ತದೋ? ಅನ್ನಲು ಅವನು – ಯಾರಾದರೂ ನನಗೆ ಅರ್ಥ ತಿಳಿಸಿಕೊಟ್ಟ ಹೊರತು ಅದು ನನಗೆ ಹೇಗೆ ತಿಳಿದೀತು? ಎಂದು ಹೇಳಿ – ನೀನು ರಥವನ್ನು ಹತ್ತಿ ನನ್ನ ಬಳಿಯಲ್ಲಿ ಕೂತುಕೋ ಎಂಬದಾಗಿ ಫಿಲಿಪ್ಪನನ್ನು ಕೇಳಿಕೊಂಡನು. ಅವನು ಓದುತ್ತಿದ್ದ ಶಾಸ್ತ್ರವಚನವು ಯಾವದೆಂದರೆ – ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆ ಆತನು ಓಯ್ಯಲ್ಪಟ್ಟನು; ಕುರಿಮರಿಯು ಉಣ್ಣೆ ಕತ್ತರಿಸುವವನ ಮುಂದೆ ಮೌನವಾಗಿರುವಂತೆ ಆತನು ಬಾಯಿತೆರೆಯಲೇ ಇಲ್ಲ. ಆತನಿಗುಂಟಾದ ದೀನಾವಸ್ಥೆಯಲ್ಲಿ ನ್ಯಾಯವು ಇಲ್ಲದೇ ಹೋಯಿತು. ಆತನ ಸಕಾಲದವರನ್ನು ಹೇಳತಕ್ಕದ್ದೇನು? ಆತನ ಜೀವವನ್ನು ಭೂಮಿಯ ಮೇಲಿನಿಂದ ತೆಗೆದುಬಿಟ್ಟರಲ್ಲಾ ಎಂಬುದೇ. ಕಂಚುಕಿಯು ಈ ವಚನವನ್ನು ಕುರಿತು – ಪ್ರವಾದಿಯು ಇದನ್ನು ಯಾರ ವಿಷಯದಲ್ಲಿ

ಹೇಳಿದ್ದಾನೆ? ತನ್ನ ವಿಷಯದಲ್ಲಿಯೋ? ಮತ್ತೊಬ್ಬನ ವಿಯದಲ್ಲಿಯೋ? ದಯಮಾಡಿ ಹೇಳಬೇಕು ಎಂದು ಫಿಲಿಪ್ಪನನ್ನು ಕೇಳಲು ಫಿಲಿಪ್ಪನು ಉಪದೇಶಿಸುವುದಕ್ಕೆ ತೊಡಗಿ, ಅದೇ ವಚನವನ್ನು ಆಧಾರ ಮಾಡಿಕೊಂಡು ಅವನಿಗೆ ಯೇಸುವಿನ ವಿಷಯವಾದ ಸುವಾರ್ತೆಯನ್ನು ತಿಳಿಸಿದನು. ಅವರು ದಾರಿಯಲ್ಲಿ ಹೋಗುತ್ತಿರುವಾಗ ನೀರಿನ ಬಳಿಗೆ ಬಂದರು. ಕಂಚುಕಿಯು – ಅಗೋ, ನೀರು; ನನಗೆ ದೀಕ್ಷಾಸ್ನಾನವಾಗುವುದಕ್ಕೆ ಅಡ್ಡಿ ಏನು? ಎಂದು ಹೇಳಿ ರಥವನ್ನು ನಿಲ್ಲಿಸು ಎಂದು ಅಪ್ಪಣೆಕೊಟ್ಟನು; ಫಿಲಿಪ್ಪನೂ ಕಂಚುಕಿಯೂ ಇಬ್ಬರೂ ನೀರಿನೊಳಗೆ ಇಳಿದರು. ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನ ಮಾಡಿಸಿದನು ಅವರು ನೀರನ್ನು ಬಿಟ್ಟು ಮೇಲಕ್ಕೆ ಬಂದಾಗ ಕರ್ತನ ಆತ್ಮ ಫಿಲಿಪ್ಪನನ್ನು ಎತ್ತಿಕೊಂಡುಹೋಗಲಾಗಿ ಕಂಚುಕಿ ಸಂತೋಷವುಳ್ಳವನಾಗಿ ತನ್ನ ದಾರಿಯನ್ನು ಹಿಡಿದು ಅವನನ್ನು ಕಾಣಲೇ ಇಲ್ಲ.

ಈ ಕಥೆಯನ್ನು ಓದಿದ ನಂತರ, ಕಥೆಯನ್ನು ಈ ವಿಧಾನಗಳಲ್ಲಿ ಒಂದನ್ನು ಪರಿಶೀಲಿಸಿ:

- ನೆನಪಿನಿಂದ ಕಥೆಯನ್ನು ಹೇಳಿರಿ.
- ಕಥೆಯ ಬಗ್ಗೆ ಮಾತನಾಡಿರಿ. ಏನಾಯಿತು?

- ಕಥೆಯನ್ನು ಮತ್ತೆ ಹೇಳಿ ಅಥವಾ ಓದಿ.
- ಕಥೆಯನ್ನು ವಿವರಿಸುವ ನಾಟಕವನ್ನು ಮಾಡಿ.
- ಕಥೆಯನ್ನು ವಿವರಿಸುವ ಚಿತ್ರಗಳನ್ನು ಬರೆಯಿರಿ.

ಕಥೆಯನ್ನು ಪರಿಶೀಲಿಸಿದ ನಂತರ, ಕಥೆಯನ್ನು ಆಧರಿಸಿ ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿರಿ:

- ದೇವರ ಬಗ್ಗೆ ನಾವು ಏನ್ನು ಕಲಿತೆವು?
- ಮನುಷ್ಯರ ಬಗ್ಗೆ ನಾವು ಏನನ್ನು ಕಲಿತೆವು?
- ನಾವು ಏನು ಮಾಡಬಾರದು?
- ನಾವು ಏನು ಮಾಡಬೇಕು?

ಈ ಸಾಮಾನ್ಯ ಪ್ರಶ್ನೆಗಳನ್ನು ಚರ್ಚಿಸಿದ ನಂತರ, ಈ ನಿರ್ದಿಷ್ಟ ಕಥೆಗೆ ಕೆಳಗಿನವುಗಳು ಸಹಾಯಕವಾಗಬಹುದು.

ಕೆಳಗಿನವುಗಳನ್ನು ಚರ್ಚಿಸಿ:

- ದೀಕ್ಷಾಸ್ನಾನ ಎಂದರೇನು?
  ರೋಮಾ 6:3–4 ಓದಿರಿ, ದೀಕ್ಷಾಸ್ನಾನವೆಂದರೆ,
  ಯೇಸುವಿನ ಮರಣ, ಹೂಣುವಿಕೆ, ಮತ್ತು

ಪುನರುತ್ಥಾನದ ಸಂಕೇತವಾಗಿದೆ. ಹಾಗೂ ನಾವು ನಮ್ಮ ಹಳೆಯ ಜೀವನಕ್ಕೆ ಮರಣ ಹೊಂದಿದ್ದು, ಯೇಸುವಿನೊಂದಿಗೆ ಹೊಸ ಜೀವನವನ್ನು ನಡೆಸಲು ಜೀವಿಸುವವರಾಗಿದ್ದೇವೆ ಎಂದರ್ಥ.

- ನಾವು ಯಾಕೆ ದೀಕ್ಷಾಸ್ನಾನ ಪಡೆಯಬೇಕು?
ಮತ್ತಾಯ 3:13–15 ಓದಿರಿ. ಯೇಸುವು ಸ್ವತ: ದೀಕ್ಷಾಸ್ನಾನವನ್ನು ಮಾಡಿಸಿಕೊಂಡನು, ಮತ್ತು ನಾವೂ ಕೂಡ ದೀಕ್ಷಾಸ್ನಾನವನ್ನು ಪಡೆಯಬೇಕು. ದೀಕ್ಷಾಸ್ನಾನ ಮಾಡಿಸಿಕೊಳ್ಳುವುದೆಂದರೆ, ನಾವು ಯೇಸುವನ್ನು ನಮ್ಮ ಕರ್ತನೆಂದು ಗುರುತ್ತಿಸುತ್ತೇವೆ.

- ಯಾರು ದೀಕ್ಷಾಸ್ನಾನ ಪಡೆಯಬೇಕು?
ಅ.ಕೃ. 2:38–41 ಅನ್ನು ಓದಿರಿ. ಪಶ್ಚಾತ್ತಾಪಪಟ್ಟು ಮತ್ತು ಯೇಸುವನ್ನು ಅಂಗೀಕರಿಸುವ ಪ್ರತಿಯೊಬ್ಬರೂ ದೀಕ್ಷಾಸ್ನಾನ ಪಡೆಯಬಹುದು.

- ನಾವು ಹೇಗೆ ದೀಕ್ಷಾಸ್ನಾನ ಪಡೆಯಬೇಕು?
ಮತ್ತಾಯ 3:13–17 ಅನ್ನು ಓದಿರಿ. ಯೇಸುವು ನೀರಿನೊಳಗೆ ಇಳಿದನು. ದೀಕ್ಷಾಸ್ನಾನ ಅಂದರೆ ನೀರಿನಲ್ಲಿ ಮುಳುಗಿ ಮಾಡಿಸಿಕೊಳ್ಳತಕ್ಕದ್ದು.

## ಅಭ್ಯಾಸ ಮಾಡಿ

ಹೇಗೆ ಮತ್ತು ಎಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಚರ್ಚಿಸಿ. ಹೊರಟು ಹೋಗಿ ಹೊಸ ವಿಶ್ವಾಸಿಗಳಿಗೆ ದೀಕ್ಷಾಸ್ನಾನ ಮಾಡಿಸಿ.

# ಭಾಗ ಮೂರು
# ಮುಂದಾಗಿ ನೋಡುವುದು

## ಬದ್ಧತೆ

ಯೇಸುವಿನ ಕಥೆ ಮತ್ತು ಆಜ್ಞೆಯಿಂದ ಏನ್ನು ಪಾಲಿಸಬೇಕೆಂದು ಚರ್ಚಿಸಿ. ಮುಂದಿನ ಭೇಟಿಯ ಮೊದಲು ಪಾಲಿಸಬೇಕಾದ ಕೆಲವು ಮಾರ್ಗಗಳು:

- ನೀವು ಮೊದಲು ದೀಕ್ಷಾಸ್ನಾನ ಮಾಡಿಸಿಕೊಂಡಿಲ್ಲದಿದ್ದರೆ, ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳಿರಿ.
- ಇತರ ಜನರೊಂದಿಗೆ (ಅ.ಕೃ. 8:26–39) ಈ ಕಥೆಯನ್ನು ಹೇಳಿರಿ.
- ಸತ್ಯವೇದವನ್ನು ಪ್ರತಿದಿನವೂ ಅಭ್ಯಾಸಮಾಡಿರಿ.

## ಪ್ರಾರ್ಥನೆ

ಪ್ರಾರ್ಥನೆಯಲ್ಲಿ ಸಮಯವನ್ನು ಒಟ್ಟಿಗೆ ಅಂತ್ಯಮಾಡಿರಿ. ಎಲ್ಲರೂ ಮಾಡಿದ ಬದ್ಧತೆಗಳಿಗಾಗಿ ಪ್ರಾರ್ಥಿಸಿ.

**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ
ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible, BSI - Kannada - J.V. published by The Bible Society of India. Used by permission.
All rights reserved.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.